**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

ಜಾ.ಸಾ : 13

ಪ್ರಾ.ಸಾ : 12

ಸಾಕ್ಷಿದಾರರ ಹೆಸರು : ಸುಧಾ ಪೈ

ಗಂಡನ ಹೆಸರು : ಸುರೇಶ ಹೆಗ್ಗಡೆ

ಪ್ರಾಯ : 50 ವರ್ಷ

ಉದ್ಯೋಗ : ಗೃಹಿಣಿ

ವಾಸಸ್ಥಾನ : ಪುತ್ತೂರು

ಪ್ರಮಾಣ ವಚನ ಭೋದಿಸಿದ ದಿನಾಂಕ : **19.03.2024**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ಈಗ ತೋರಿಸುತ್ತಿರುವ ನಿಪಿ-79 ರಲ್ಲಿ ನನ್ನ ಸಹಿ ಇದ್ದು, ಸಾಕ್ಷಿ ಸಹಿಯನ್ನು ನಿಪಿ-79-ಬಿ ಎಂದು ಗುರುತಿಸಲಾಯಿತು. ಸದರಿ ನಿಪಿ-79 ಕ್ಕೆ ಸಹಿಯನ್ನು ನಾನು ಸಿನಿಯರ ಸುಪಿರಿಯಂಟೆಂಡೆಂಟ ಪೊಸ್ಟ ಆಪೀಸ ಅಧಿಕಾರಿ ಪತ್ತೂರು ಅವರ ಮುಂದೆ ದಿಃ 18-05-2020 ರಂದು ಸಹಿ ಮಾಡಿದ್ದೇನೆ . ಆಗ ಆ ಸಮಯದಲ್ಲಿ ಪೋಲಿಸರು ಬಂದಿದ್ದು, ಆರೋಪಿ ಮಾಡಿದ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯು ಬರೆದ ಪತ್ರ ಪೋಲಿಸರು ಕೇಳಿದ್ದು, ಅದಕ್ಕೆ ಸಂಬಂದಿಸಿದಂತೆ ಪೋಲಿಸರು ಮಹಜರ ಮಾಡಿದ್ದು ಆ ಪತ್ರವನ್ನು ಮೊಹನವರು ಪೋಲಿಸರಿಗೆ ಹಸ್ತಾಂತರಿಸಿರುತ್ತಾರೆ . ಆ ಪತ್ರವು ಕನ್ನಡ ಅಕ್ಷರದಲ್ಲಿ ಇದ್ದು ನಾನು ಇಂಗ್ಲೀಷನಲ್ಲಿ ಸಹಿ ಮಾಡಿದ್ದೇನೆ ಆ ಸಮಯದಲ್ಲಿ ಪೋಲಿಸರು ಮಹಜರ ಮಾಡಿರುತ್ತಾರೆ . ಮಹಜರ ಸಮಯ ನಾನು ಅಂಚೆ ಸಹಾಯಕಳಾಗಿ ಕೆಲಸ ಮಾಡುತ್ತಿದ್ದೆ .

ನನ್ನ ಜೊತೆ ಮೊಹನ, ಮೆಂಕಟೇಶ್ವರ ಸಹಿ ಮಾಡಿರುತ್ತಾರೆ . ನಿಪಿ-80 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ .

**ಪಾಟೀ ಸವಾಲುಃ ಆರೋಪಿ ಪರ ಶ್ರೀಯುತ ಡಿ ಕೆ ವಕೀಲರಿಂದಃ**

ದಿಃ 18-05-2020 ರಂದು ನಾನು ಅಂಚೇ ಸಹಾಯಕಳಾಗಿ ಸಿನಿಯರ ಸುಪಿರಿಂಟೆಂಡೆಂಟ್ ಅಧಿಕಾರಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೆ . ಮಹಜರಗೆ ಸಹಿ ಮಾಡುವಾಗ ಸಿನಿಯರ ಸುಪಿರಿಂಟೆಂಡೆಂಟ್ ಅಧಿಕಾರಿ ಇರಲಿಲ್ಲ ಎಕೆಂದರೆ ಅವರು ವಿಜಿಟ್ಸಗಾಗಿ ಹೋಗುತ್ತಿರುತ್ತಾರೆ, ಕಚೇರಿಯಲ್ಲಿ ಮೊಹನ ರವರ ಇರುತ್ತಾರೆ . ಸದರಿ ವಹಜರನ್ನು ಸಿನಿಯರ ಸುಪಿರಿಂಟೆಂಡೆಂಟ್ ಅಧಿಕಾರಿಯ ಕಚೇಯಲ್ಲಿ ಬರೆಯಲಾಗಿರುತ್ತದೆ ಅದನ್ನು ಟೈಪ ಮಾಡಲಾಗಿರುತ್ತದೆ ಅಂದರೆ ಸದರಿ ಸಹಿಯನ್ನು ನೀವು ಮೊಹನ ರವರ ಕಚೇರಿಯಲ್ಲಿ ಮಾಡಿರುತ್ತೀರಾ ಎಂದರೆ ಹೌದು . ಮೊಹನವರ ಕಚೇರಿಗೆ ಪೋಲಿಸರು 12-00 ರಿಂದ 12-15 ರ ಅವಧಿಯಲ್ಲಿ ಬಂದಿರುತ್ತಾರೆ . ಎಷ್ಟು ಜನ ಪೋಲಿಸರು ಬಂದಿರುತ್ತಾರೆ ಎಂದರೆ ಇಬ್ಬರು ಪೋಲಿಸರು ಬಂದಿರುತ್ತಾರೆ ಅವರ ದರ್ಜೆ ಗೊತ್ತಿಲ್ಲ . ಆ ಸಮಯ ಅಲ್ಲಿ ಆರೋಪಿ ಗಿರೀಶ ಇರಲಿಲ್ಲ . ಆರೋಪಿ ನನ್ನ ಕೈ ಕೆಳಗೆ ಕೆಲಸ ಮಾಡುತ್ತಿರಲ್ಲಿಲ್ಲ ಅವರ ಸಹಿ ಹೇಗೆ ಇರುತ್ತದೆ ಎಂದು ನಿಮಗೆ ಹೇಳಲಾಗುತ್ತದಾ ಎಂದರೆ ಹೌದು . ಹೇಗೆ ಎಂದರೆ ನಾನು ನನ್ನ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವಾಗ ರಿಪ್ರೆಸೆಂಟೆಶನ ಲೆಟರ ಬರುವಾಗ ಅವರ ಸಹಿ ನೋಡಿದ್ದೇನೆ .

ನಿಪಿ-80 ನ್ನು ನಿಮ್ಮ ಸಮಕ್ಷಮದಲ್ಲಿ ಬರೆದದ್ದು ಅಲ್ಲ ಎಂದರೆ ಸರಿ . ಅವರು ಎಷ್ಟು ಸಮಯದ ವರೆಗೆ ವೈದ್ಯಕೀಯ ರಜೆ ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಆರೋಪಿ ಯು ಯಾವ ರೀತಿ ಸಹಿಹಾಕುತ್ತಾರೆ ಎಂದು ನಿಮಗೆ ನಿಖರವಾಗಿ ಹೇಳಲು ಬರುತ್ತದಾ ಎಂದರೆ ಈ ಪತ್ರಕ್ಕೆ ಇಂಗ್ಲೀಷನಲ್ಲಿ ಸಹಿ ಹಾಕಿರುತ್ತಾರೆ . ಆ ಸಹಿಯನ್ನು ನನ್ನ ಸಮಕ್ಷಮದಲ್ಲಿ ಹಾಕಿಲ್ಲ ಎಂದರೆ ಸರಿ . ನಿಪಿ-80 ನ್ನು ಯಾರು ಹಾಜರು ಪಡಿಸಿದ್ದು

ಎಂದರೆ ಮೊಹನವರು ಹಾಜರುಪಡಿಸಿರುತ್ತಾರೆ . ಸದರಿ ಪತ್ರ ಮೊಹನ ರವರ ಬಳಿಯಲ್ಲಿ ಹೇಗೆ ಬಂತು ಎಂದರೆ ಅದು ಅವರ ಪರ್ಸನಲ್ ಫೈಲ್ ನಲ್ಲಿ ಇತ್ತು. ಅದನ್ನು ಎಷ್ಟು ಪುಟದಲ್ಲಿ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ . ನೀವು ಸಹಿ ಹಾಕಿದ ದಾಖಲಾತಿಗಳಲ್ಲಿ ಏನೆಲ್ಲ ಬರೆಯಲಾಗಿದೆ ಎಂದು ನಿಮಗೆ ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ . ವೆಂಕಟೇಶರವರ ಮೊಬೈಲ ನಂಬರ ನನಗೆ ಗೊತ್ತಿಲ್ಲ .

ನಿಪಿ-79 ನ್ನು ಹೇಗೆ ತಯಾರಿಸಿದ್ದು ಎಂದರೆ ಲ್ಯಾಪಟ್ಯಾಪ ಮುಖಾಂತರ ತಯಾರಿಸಿರುತ್ತಾರೆ, ಅದನ್ನು ಉದಯರವಿ ಪೋಲಿಸರು ತಯಾರಿಸಿರುತ್ತಾರೆ . ಅದನ್ನು ಅಲ್ಲಿಯೇ ಪ್ರೀಂಟ ತೆಗೆಯಲಾಗಿರುತ್ತದೆ . ಪ್ರೀಂಟರ ನಮ್ಮ ಕಚೇರಿಯದ್ದು ಲ್ಯಾಪಟಾಪ ಉದಯರವಿ ಬರುವಾಗ ತೆಗೆದುಕೊಂಡು ಬಂದಿದ್ದರು . ಆರೋಪಿ ವಂಚನೆ ಮಾಡಿದ್ದರ ಬಗ್ಗೆ ನಿಮಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಎಸ್ ಬಿ ಐ ಖಾತೆಗೆ ಸಂಬಂಧಿಸಿದಂತೆ ವಂಚನೆ ಮಾಡಿರಬಹುದು, ಎಷ್ಟು ವಂಚನೆ ಮಾಡಿರುತ್ತಾರೆ ಎಂದು ಗೊತ್ತಿಲ್ಲ . ನಿಮ್ಮ ಸಮಕ್ಷಮದಲ್ಲಿ ಉದಯರವಿಯವರು ನಿಪಿ-79 ರನ್ನು ಮಾಡಿಲ್ಲ ಎಂದರೆ ಸರಿಯಲ್ಲ , ನಿಪಿ-80 ನ್ನು ಹಾಜರು ಪಡಿಸಿದ್ದು ಎಂದರೆ ಸರಿಯಲ್ಲ . ನೀವು ಮೊಹನ ರವರ ಜೊತೆಗೆ ಹೋಗಿ ಸಂಪ್ಯ ಪೋಲಿಸ ಠಾಣೆಯಲ್ಲಿ ಸಹಿ ಕೊಟ್ಟಿದ್ದು ಎಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯ್ಲುಲ.

ಮರು ವಿಚಾರಣೆ: ಇಲ್ಲ

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು,ದ.ಕ.